ಭೂಮಾಪನ ಇಲಾಖೆಯಿಂದ ಭೂಮಾಪನ ತರಬೇತಿ.

2463(2079)

ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೂಮಾಪನ ಇಲಾಖೆಯಿಂದ 1998ರಿಂದ ಜನವರಿ 2000 ಇಸವಿಯವರೆಗೆ ಎಷ್ಟು ಜನಕ್ಕೆ ಭೂಮಾಪನ ತರಬೇತಿ ನೀಡಲಾಗಿದೆ?

ಆ) ಎಷ್ಟು ಜನ ತರಬೇತಿದಾರರಿಗೆ ಕೆಲಸ ನೀಡಲಾಗಿದೆ, ಉಳಿದವರ ಸಂಖ್ಯೆ ಎಷ್ಟು?

ಇ) ಇದರಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗ ತರಬೇತುದಾರರಾಗಿದ್ದಾರೆ, ಎಷ್ಟು ಜನಕ್ಕೆ ಉದ್ಯೋಗ ಕಲ್ಪಿಸಲಾಗಿದೆ ಮಿಕ್ಕ ತರಬೇತಿ ಪಡೆದವರಿಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಈ) ಬಹಳ ಹಿಂದೆಯೇ ಭೂಮಾಪನ ಸರ್ವೆ ನಡೆದಿದ್ದು, ಅನೇಕ ಭಾಗಗಳಲ್ಲಿ ಭೂ ಒಡೆತನ ಸ್ವಾಧೀನದ ಬಗ್ಗೆ ರಾಜ್ಯದ ಹಲವು ಭಾಗಗಳಲ್ಲಿ ಆಗಾಗ್ಗೆ ಅಹಿತಕರ ಘಟನೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) 287.

ಆ) ತರಬೇತಿ ನೀಡಲಾದ ಎಲ್ಲಾ 287 ತರಬೇತಿದಾರರಿಗೆ ಕೆಲಸ ನೀಡಲಾಗಿದೆ.

ಇ) ಇದರಲ್ಲಿ 89 ಜನ ಪರಿಶಿಷ್ಟ ಜಾತಿ ಮತ್ತು 12 ಜನ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ತರಬೇತಿ ಹೊಂದಿರುತ್ತಾರೆ. ಆಯ್ಕೆಯಾದ ಎಲ್ಲಾ ಅಭ್ಯರ್ಥಿಗಳಿಗೆ ಉದ್ಯೋಗವಕಾಶ ಕಲ್ಪಿಸಲಾಗಿದೆ.

ಈ) ಇಲ್ಲ

ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಖಾಸಗಿ ವಾಹನಗಳ ಸಂಚಾರ.

2464(2081)

ಶ್ರೀ ಅಂಜನಮೂರ್ತಿ(ನೆಲಮಂಗಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಎಷ್ಟು ಖಾಸಗೀ ವಾಹನಗಳು ಸಂಚಾರ ಮಾಡುತ್ತಿವೆ?

2) ಅವುಗಳಲ್ಲಿ ಹೆಚ್ಚಿನ ಭಾಗ ಹಳ್ಳಿಗಳ ರಸ್ತೆಗಳಲ್ಲಿ ಸಂಚರಿಸಲು ಪರವಾನಿಗೆ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

3) ಆದರೆ ಆ ಖಾಸಗಿ ವಾಹನಗಳು ಪರವಾನಿಗೆ ಪಡೆದಿರುವ ಮಾರ್ಗಗಳಲ್ಲಿ ಓಡಿಸದೇ ತಮ್ಮಲ್ಲಿ ಆದ ರೀತಿಯಲ್ಲಿ ಮುಖ್ಯ ರಸ್ತೆಗಳಲ್ಲಿ ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

4) ಗ್ರಾಮಾಂತರ ಪ್ರದೇಶದ ರೈತರು ತಾವು ಬೆಳೆದ ಹಣ್ಣು:ತರಕಾರಿಗಳನ್ನು ಪಟ್ಟಣಕ್ಕೆ ಸಾಗಿಸಲು ಅನುಭವಿಸುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೆ?

5) ಇವೆಲ್ಲವನ್ನು ಗಮನಿಸಿ ಖಾಸಗಿ ವಾಹನ ಮಾಲೀಕರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

1) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಂಚರಿಸಲು ಒಟ್ಟು 299 ಮಜಲು ವಾಹನಗಳಿಗೆ ಪರವಾನಿಗೆ ನೀಡಲಾಗಿದೆ.

2) ಹೌದು

3) ಬಂದಿದೆ

4) ಇಲ್ಲ

5) ಪರವಾನಿಗೆ ನಿಬಂಧನೆಯನ್ನು ಉಲ್ಲಂಘಿಸಿ ನಿಗದಿತ ಮಾರ್ಗಗಳಲ್ಲಿ ಸಂಚರಿಸದೇ, ಬೇರೆ ಮಾರ್ಗಗಳಲ್ಲಿ ಸಂಚರಿಸುವಂಥ ಮಜಲು ವಾಹನಗಳನ್ನು ಸತತವಾಗಿ ತಪಾಸಣೆ ಮಾಡಿ ಕ್ರಮ ಕೈಗೊಳ್ಳಲಾಗುತ್ತಿದೆ.

ಹಿಡುವಳಿ ದೃಢೀಕರಣ ಪತ್ರವನ್ನು ತಹಶೀಲ್ದಾರರಿಗೆ ವರ್ಗಾವಣೆ ಮಾಡುತ್ತಿರುವದು.